ಕರ್ನಾಟಕ ವಿಧಾನ ಪರಿಷತ್

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1277
ಸದಸ್ಯರ ಹೆಸರು	:	ಶ್ರೀ ಎಂ.ಪಿ ಸುನೀಲ್ ಸುಬ್ರಮಣಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸಬೇಕಾದ ದಿನಾಂಕ	:	17-03-2021
ಉತ್ತರಿಸುವ ಸಚಿವರು	:	ಮಾನ್ಯ ಕಂದಾಯ ಸಚಿವರು

ಪ್ರಶ್ನೆ	ಉತ್ತರ
(ಅ) ಕಳೆದ ಫೆಬ್ರುವರಿ 19ರಂದು ಕೊಡಗು ಜಿಲ್ಲೆಯ ಶನಿವಾರಸಂತೆ, ಅಂಕನಹಳ್ಳಿ, ನಿಡ್ತ ಗ್ರಾಮಗಳ ವ್ಯಾಪ್ತಿಯಲ್ಲಿ ಆಲಿಕಲ್ಲು ಸಹಿತ ಭಾರಿ ಮಳೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಎಷ್ಟು ಪ್ರದೇಶದಲ್ಲಿ ಈ ಮಳೆಯು ಬಂದಿದೆ; (ಸಂಪೂರ್ಣ ವಿವರ ನೀಡುವುದು)	ಬಂದಿದೆ. ಫೆಬ್ರುವರಿ-19ರಂದು ಕೊಡಗು ಜಿಲ್ಲೆಯ ಶನಿವಾರಸಂತೆ ಗ್ರಾಮದಲ್ಲಿ 22.5 ಮಿ.ಮಿ, ಅಂಕನಹಳ್ಳಿ ಹಾಗೂ ನಿಡ್ತ ಗ್ರಾಮಗಳ ವ್ಯಾಪ್ತಿಯಲ್ಲಿ 27 ಮಿ.ಮಿ ಆಲಿಕಲ್ಲು ಸಹಿತ ಮಳೆಯಾಗಿದೆ.
(ಆ) ಈ ಸಂದರ್ಭದಲ್ಲಿ ಕಾಫಿ, ಹಸಿರು ಮೆಣಸು, ಕಾಳು ಮೆಣಸು, ಶುಂಟಿ, ಸಿಹಿ ಗೆಣಸು, ಅಡಿಕೆ ಕೃಷಿಗೆ ಹಾನಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಈ ಅಕಾಲಿಕ ಮಳೆಗೆ ತುತ್ತಾಗಿ ನಷ್ಟವಾಗಿರುವ ರೈತರಿಗೆ ನೀಡಲಾಗಿರುವ ಪರಿಹಾರವೇನು; (ಸಂಪೂರ್ಣ ಮಾಹಿತಿ ನೀಡುವುದು)	ಆಲಿಕಲ್ಲು ಮಳೆಯಿಂದ ಬೆಳೆಹಾನಿಯಾದ ಪ್ರಕರಣಗಳಿಗೆ ಕಂದಾಯ, ಕೃಷಿ ಹಾಗೂ ತೋಟಗಾರಿಕೆ ಇಲಾಖೆಯ ಅಧಿಕಾರಿಗಳು ಜಂಟಿ ಸರ್ವೆ ನಡೆಸಿ, ಬೆಳೆಹಾನಿ ಪ್ರಮಾಣವು ಶೇಕಡಾ 33ಕ್ಕಿಂತ ಹೆಚ್ಚಿದ್ದ ಪ್ರದೇಶಗಳಲ್ಲಿ ಕೇಂದ್ರ ಸರ್ಕಾರದ ಮಾರ್ಗಸೂಚಿಯನ್ವಯ ಇನ್‌ಪುಟ್ ಸಬ್ಸಿಡಿ ಪಾವತಿಸಲಾಗುತ್ತದೆ. ಪ್ರಾಥಮಿಕ ವರದಿಯಂತೆ ಕೆಳಕಂಡಂತೆ ಬೆಳೆ ಹಾನಿಯಾಗಿರುತ್ತದೆ. **ನಿಡ್ತ ಗ್ರಾಮ**-4ಎಕರೆ ಹಸಿಮೆಣಸಿನಕಾಯಿ, 5ಎಕರೆ ಬಾಳೆ, 300ಎಕರೆ ಕಾಫಿ, 60ಎಕರೆ ಕಾಳು ಮೆಣಸು, 10ಎಕರೆ ಶುಂಠಿ, 5ಎಕರೆ ಸಿಹಿ ಗೆಣಸು, 12ಎಕರೆ ಅಡಿಕೆ ಬೆಳೆಹಾನಿಯಾಗಿರುತ್ತದೆ. **ಅಂಕನಹಳ್ಳಿ ಗ್ರಾಮ**-15ಎಕರೆ ಜೋಳ, 5ಎಕರೆ ಹಸಿ ಮೆಣಸಿನಕಾಯಿ, 10ಎಕರೆ ಬಾಳೆ, 60ಎಕರೆ ಕಾಫಿ, 30ಎಕರೆ ಕಾಳು ಮೆಣಸು, 60ಎಕರೆ ಶುಂಠಿ, 25ಎಕರೆ ಸಿಹಿ ಗೆಣಸು, 25ಎಕರೆ ಅಡಿಕೆ ಬೆಳೆಹಾನಿಯಾಗಿರುತ್ತದೆ. **ಶನಿವಾರಸಂತೆ ಗ್ರಾಮ**ದಲ್ಲಿ ಬೆಳೆಹಾನಿಯಾಗಿರುವುದಿಲ್ಲ. ಜಂಟಿ ಸರ್ವೆ ಕಾರ್ಯ ಪ್ರಗತಿಯಲ್ಲಿದ್ದು, ಕೇಂದ್ರ ಸರ್ಕಾರದ ಮಾರ್ಗಸೂಚಿಯನ್ವಯ ಇನ್‌ಪುಟ್ ಸಬ್ಸಿಡಿ ಪಾವತಿಸಲಾಗುವುದು.

ಕಂಇ 109 ಟಿಎನ್‌ಆರ್ 2021

(ಆರ್. ಅಶೋಕ)
ಕಂದಾಯ ಸಚಿವರು